2) ಶ್ರೀವಿಜಯೀಂದ್ರವಿಜಯದಲ್ಲಿಯ (ಸರ್ಗ - 3) ಶ್ರೀಜಿತಾಮಿತ್ರರ ಚರಿತ್ರೆಗೆ ಸಂಬಂಧಿಸಿದ ಕೆಲ ಶ್ಲೋಕಗಳನ್ನು ಉದ್ಧರಿಸಿ ಕೆಳಗೆ ಕೊಡಲಾಗಿದೆ.

ಅಥಾಸೌ ವಿಬುಧೇಂದ್ರಾರ್ಯೋ ದೇಶೇ ದೇಶೇ ಜನಾನ್ಮುನಿಃ ।
ತಪ್ತಚಕ್ರಾಂಕಿತಾನ್ ಕೃತ್ವಾ ಚಚಾರ ಭುವಿ ಪೂಜಿತಃ ।।1।।

ಅನಂತರ ಶ್ರೀವಿಬುಧೇಂದ್ರತೀರ್ಥರು ದೇಶದ ಅನೇಕ ಸ್ಥಳಗಳಲ್ಲಿ ಸಂಚರಿಸುತ್ತ ಅಲ್ಲಿದ್ದ ಶಿಷ್ಯರಿಗೆ ತಪ್ತಮುದ್ರಾಧಾರಣೆಯನ್ನು ಮಾಡುತ್ತ ರಾಜಮಹಾರಾಜರುಗಳಿಂದಲೂ ವಿದ್ವಜ್ಜನರಿಂದಲೂ ಸನ್ಮಾನಿಸಲ್ಪಟ್ಟರು.

ವಿಬುಧೇಂದ್ರಮುನಿರ್ದೇಶಾನಟನ್ ಪ್ರಾಪ ಪುರಂ ಶುಭಂ ।
ತತ್ರ ತತ್ಪುರವಾಸೇನ ಶಿಷ್ಯೇಣ ಚ ಸುಪೂಜಿತಃ ।।2।।

ಶ್ರೀವಿಬುಧೇಂದ್ರತೀರ್ಥರು ದೇಶಸಂಚಾರ ಮಾಡುತ್ತ ಶಿವಪುರ ಎಂಬ ಹೆಸರಿನ ಗ್ರಾಮಕ್ಕೆ ದಯಮಾಡಿಸಿದರು. ಆಗ ಶಿವಪುರ ಗ್ರಾಮವಾಸಿಯಾದ ಅನಂತಪ್ಪ ಎಂಬ ಶಿಷ್ಯನು ಗುರುಗಳನ್ನು ಆದರಪೂರ್ವಕ ಸ್ವಾಗತಿಸಿ ಅರ್ಘ್ಯಪಾದ್ಯಾದಿ ಉಪಚಾರಗಳಿಂದ ಪೂಜಿಸಿದನು.

ಅಥಾಸ್ಮೈ ಪ್ರದದಾವರ್ಚಾಂ ವಿಷ್ಣೋರ್ನಾರಾಯಣಸ್ಯ ಚ ।
ಗೃಹೀತ್ವಾ ಪೂಜಯಾಮಾಸ ವಿಬುಧೇಂದ್ರಾಜ್ಞಯಾ ಪ್ರಭುಃ ।।3।।

ಕೆಲ ದಿನಗಳ ವರೆಗೆ ಶಾನುಭೋಗ ಅನಂತಪ್ಪನ ಆತಿಥ್ಯವನ್ನು ಸ್ವೀಕರಿಸಿ ಅಲ್ಲಿಂದ ಹೊರಡುವಾಗ ಶ್ರೀವಿಬುಧೇಂದ್ರತೀರ್ಥರು ಅನಂತಪ್ಪನಿಗೆ ವಿಷ್ಣುವಿನ ಮತ್ತು ನಾರಾಯಣನ ಪ್ರತಿಮೆಯನ್ನು ಮತ್ತು ನರಸಿಂಹ ಶಾಲಿಗ್ರಾಮವನ್ನು ನಿತ್ಯ ಪೂಜೆ ಮಾಡುವದಕ್ಕಾಗಿ ಅನುಗ್ರಹಪೂರ್ವಕ ಕೊಟ್ಟರು. ಆ ಪ್ರತಿಮೆಗಳನ್ನು ಸ್ವೀಕರಿಸಿದ ಅನಂತಪ್ಪನು ಶ್ರೀವಿಬುಧೇಂದ್ರರ ಆಜ್ಞಾನುಸಾರವಾಗಿ ನಿತ್ಯದಲ್ಲಿ ಪೂಜಿಸಿದನು.

ನೈವೇದ್ಯಸಮಯೇ ಕೃಷ್ಣಃ ಸರ್ವಮನ್ನಮಭಕ್ಷಯತ್ ।

ಪ್ರಭುಕೃತ್ಯಂ ಮುನಿಃ ಶ್ರುತ್ವಾ ವಿಸ್ಮಿತೋವಾಚ ತಂ ಪ್ರಭುಂ ।।

ನಿತ್ಯವೂ ನೈವೇದ್ಯ ಸಮಯದಲ್ಲಿ ಶಾಲಗ್ರಾಮಾಂತರ್ಗತ ಶ್ರೀನರಸಿಂಹನು(ಕೃಷ್ಣನು) ನಿವೇದಿಸಲ್ಪಟ್ಟ ಅನ್ನವನ್ನೆಲ್ಲ ತಿಂದುಬಿಡುತ್ತಿದ್ದನು. ಶ್ರೀನರಸಿಂಹದೇವರು ಅನಂತಪ್ಪನ ಮೇಲೆ ಮಾಡಿದ ಈ ಅನುಗ್ರಹ ವಾರ್ತೆಯನ್ನು ಕೇಳಿ ಮತ್ತು ಪ್ರತ್ಯಕ್ಷದಲ್ಲಿ ಕಂಡ ಶ್ರೀವಿಬುಧೇಂದ್ರತೀರ್ಥರು ಪ್ರಿಯಶಿಷ್ಯನಾದ ಅನಂತಪ್ಪನನ್ನು ಕುರಿತು ಹೇಳಿದರು.

ಮತ್ತಃ ಸ್ವೀಕುರು ಸನ್ಯಾಸಂ ತದ್ಯೋಗ್ಯಸ್ತ್ವಂ ಸಮರ್ಥಯೇ ।
ಓಮಿತ್ಯುಕ್ತ್ವಾ ಸ್ವೀಚಕಾರ ಸನ್ಯಾಸಂ ವಿಧಿಪೂರ್ವಕಂ ।।

ಅಯ್ಯಾ, ಶಿಷ್ಯೋತ್ತಮಾ, ನಮ್ಮಿಂದ ನೀನು ಸನ್ಯಾಸಾಶ್ರಮವನ್ನು ಸ್ವೀಕರಿಸಬೇಕು. ನೀನು ನಮ್ಮ ಉತ್ತರಾಧಿಕಾರಿಯಾಗಲು ಯೋಗ್ಯನಾಗಿರುವುದನ್ನು ನಾವು ಮನಗಂಡಿದ್ದೇವೆ. ಆಗ ಓಂ ಎಂದು ಹೇಳುತ್ತ ಗುರುಗಳ ಈ ಆಜ್ಞೆಯನ್ನು ಶಿರಸಾಮಾನ್ಯ ಮಾಡಿ ಅನಂತಪ್ಪನು ಶ್ರೀವಿಬುಧೇಂದ್ರರಿಂದ ವಿಧಿಪೂರ್ವಕ ಸನ್ಯಾಸಾಶ್ರಮವನ್ನು ಸ್ವೀಕರಿಸಿದನು.

ಜಿತಾ ಅಮಿತ್ರಾಃ ಸರ್ವತ್ರ ಜಿತಾಮಿತ್ರಂ ವದಂತಿ ಹಿ ।
ವಿಬುಧೇಂದ್ರಕರೋದ್ಭೂತಂ ವಿಬುಧೇಂದ್ರಗುರೂಪಮಮ್ ।।6।।

ಶ್ರೀವಿಬುಧೇಂದ್ರತೀರ್ಥರ ಕರಕಮಲ ಸಂಜಾತರಾಗಿ 'ಜಿತಾಮಿತ್ರ' ಎಂಬ ಆಶ್ರಮನಾಮವನ್ನು ಪಡೆದ ಇವರು ಎಲ್ಲೆಡೆ ಪ್ರತಿವಾದಿಗಳನ್ನು ಜಯಿಸಿದ್ದರಿಂದ 'ಜಿತಾಮಿತ್ರ' ಎಂಬ ಅನ್ವರ್ಥಕ ನಾಮವುಳ್ಳವರಾದರು. ಗುರುಗಳಾದ ಶ್ರೀವಿಬುಧೇಂದ್ರತೀರ್ಥರಂತೆ ಅದ್ವೈತ ಶೈವ ಮತಗಳನ್ನು ನಿರಾಕರಿಸಿ ಪ್ರತಿವಾದಿಗಜಗಳಿಗೆ ಸಿಂಹಸ್ವಪ್ನರಾದರು.

ಜಿತಾಮಿತ್ರಗುರುಂ ವಂದೇ ಪೂರ್ಣಪ್ರಜ್ಞಮತಾನುಗಂ ।
ಪೂಜಯಾಮಾಸ ಪೂಜಾರ್ಥಂ ರಾಜತಂ ರಾಮವಿಗ್ರಹಂ ।।7।।

ಪೂರ್ಣಪ್ರಜ್ಞರ ಮತಾನುಯಾಯಿಗಳಾದ ಶ್ರೀಜಿತಾಮಿತ್ರಗುರುಗಳನ್ನು ಭಕ್ತಿಯಿಂದ ವಂದಿಸುತ್ತೇನೆ. ಮಹಿಮಹಿಮರಾದ ಶ್ರೀಜಿತಾಮಿತ್ರರು ಗುರುಗಳಿಂದ ಪ್ರಾಪ್ತವಾದ ಶ್ರೀಮದಾಚಾರ್ಯ ಕರಾರ್ಚಿತ ದಿಗ್ವಿಜಯ ರಾಮದೇವರ ರಜತ ಪ್ರತಿಮೆಯನ್ನು ನಿತ್ಯವೂ ಪೂಜಿಸುತ್ತಿದ್ದರು.

**ಚಚಾರ ಪೃಥಿವೀಂ ಸರ್ವಾಂ ಪೂಜಯನ್ ರಾಮರಾಜತೀಂ ।**
**ವದಂತಿ ಶ್ಲೋಕಮೇಕಂ ಚ ಜಿತಾಮಿತ್ರಸ್ಯ ಶೋಭನಂ ।।8।।**

ಶ್ರೀಜಿತಾಮಿತ್ರರು ದಿಗ್ವಿಜಯ ರಾಮದೇವರನ್ನು ಪೂಜಿಸುತ್ತ ದೇಶದಲ್ಲೆಲ್ಲ ಸಂಚರಿಸಿದರು. ಶ್ರೀಜಿತಾಮಿತ್ರರನ್ನು ಕುರಿತು ಪುಣ್ಯಪ್ರದವಾದ ಒಂದು ಶ್ಲೋಕ ವನ್ನು ಸಜ್ಜನರೆಲ್ಲರೂ ಪಠಿಸುತ್ತಾರೆ.

**ಸಪ್ತರಾತ್ರಂ ಕೃಷ್ಣವೇಣ್ಯಾಮುಷಿತ್ವಾ ಪುನರುತ್ಥಿತಂ ।**
**ಜಿತಾಮಿತ್ರಗುರುಂ ವಂದೇ ವಿಬುಧೇಂದ್ರಕರೋದ್ಭವಂ ।।9।।**

ಕೃಷ್ಣವೇಣೀ ನದಿಯಲ್ಲಿ ಏಳು ದಿನಗಳ ವರೆಗೆ ಮುಳುಗಿದ್ದು ನಂತರ ಮೇಲೆದ್ದ, ಶ್ರೀವಿಬುಧೇಂದ್ರ ಕರಕಮಲಸಂಜಾತರಾದ ಶ್ರೀಜಿತಾಮಿತ್ರಗುರುಗ ಳನ್ನು ವಂದಿಸುತ್ತೇನೆ.

**ಆಶ್ವೀಜೇ ಮಾಸಿ ಪಕ್ಷೇ ಚ ಕೃಷ್ಣೇ ಕೀಲಕವತ್ಸರೇ ।**
**ಅಷ್ಟಮ್ಯಾಂ ಕಾಡಲೂರಾಖ್ಯಸಂಗಮೇ ಸಂಸ್ಥಿತೋಽಭವತ್ ।।**

ಕೀಲಕ ಸಂವತ್ಸರದ ಆಶ್ವಿನ ಮಾಸದ ಕೃಷ್ಣಪಕ್ಷದ ಅಷ್ಟಮಿಯ ದಿನ ಶ್ರೀಜಿತಾಮಿತ್ರರು ಕಾಡಲೂರ ಗ್ರಾಮದ ಬಳಿ ಇರುವ ಸಂಗಮ ಸ್ಥಳದಲ್ಲಿ ಸಂಸ್ಥಿತ ರಾದರು.

(ವಿ.ವಿ. ಸರ್ಗ - 3)

--------★--------